ಅ) ಆಲೂರಿನಲ್ಲಿರುವ ಬಸ್ ನಿಲ್ದಾಣವು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದು ಚಿಕ್ಕದಾಗಿದ್ದು ಹಾಗೂ ಶಿಥಿಲಗೊಂಡಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಆ ಬಸ್ ನಿಲ್ದಾಣದ ನಿರ್ಮಾಣ ಕಾರ್ಯವನ್ನು ಸರ್ಕಾರದವರು ಯಾವಾಗ ಪ್ರಾರಂಭಿಸುವರು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಸದರಿ ಬಸ್ ನಿಲ್ದಾಣವು ಮಂಡಲ ಪಂಚಾಯಿತಿಗೆ ಸೇರಿರುತ್ತದೆ. ಕ.ರಾ.ರ.ಸಾ. ಸಂಸ್ಥೆಯು ಮಂಡಲ ಪಂಚಾಯಿತಿಯಿಂದ ಬಸ್ ನಿಲ್ದಾಣದ ಜಾಗ ಹಾಗೂ ಕಟ್ಟಡವನ್ನು ಖರೀದಿಸಲು ಯೋಚಿಸಿದೆ.

ಇ) ಲೋಕೋಪಯೋಗಿ ಇಲಾಖೆಯವರಿಂದ ಬಸ್ ನಿಲ್ದಾಣ ಜಾಗದ ಮೌಲ್ಯದ ವಿವರ ದೊರೆತ ನಂತರ ಖರೀದಿಯ ಬಗ್ಗೆ ಅನುಸರಿಸಬೇಕಾದ ಕ್ರಮಗಳು ಮುಗಿದ ತಕ್ಷಣ ಬಸ್ ನಿಲ್ದಾಣ ನಿರ್ಮಾಣದ ಕಾರ್ಯವನ್ನು ತೆಗೆದುಕೊಳ್ಳಲಾಗುವುದು.

ನಿಪ್ಪಾಣಿಯಲ್ಲಿ ಕೆಎಸ್ ಆರ್ ಟಿಸಿ ಡಿಪೋ

1040 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಪ್ಪಾಣಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೂತನ ಬಸ್ ಘಟಕದ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಆ) ಹೊಸ ಬಸ್ ಘಟಕ ನಿರ್ಮಾಣ ಕಾರ್ಯದ ಒಟ್ಟು ಮೊತ್ತವೆಷ್ಟು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕೆಲಸ ಈಗಾಗಲೇ ಪ್ರಾರಂಭವಾಗಿದೆ.

ಆ) ಅಂದಾಜು ಪಟ್ಟಿಯ ಮೊತ್ತ ರೂ. 50.00 ಲಕ್ಷಗಳು

(ಗೊಂದಲ)

ಉಪಾಧ್ಯಕ್ಷಣಿಯವರು : ತಾವು ಕುಳಿತುಕೊಂಡರೆ ಹೇಳುತ್ತೇನೆ. ಈ ಪ್ರಶ್ನೆಗೆ 7-8 ಜನ ಸಪ್ಲಿಮೆಂಟರಿ ಪ್ರಶ್ನೆ ಕೇಳುವುದಕ್ಕೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ಅವರ ಉತ್ತರದಲ್ಲಿ ಸಮಾಧಾನ ಆಗದಿದ್ದರೆ ಬೇರೆ ರೂಪದಲ್ಲಿ ನನಗೆ ಈ ವಿಷಯವನ್ನು ಕಳುಹಿಸಿದರೆ ಅದನ್ನು ನಾನು ಅಲೋ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರೆಸ್ಥಾಪಿಸಲಾದ ವಿಷಯ ಜಿಲ್ಲಾ ಪರಿಷತ್ ಚುನಾವಣೆ ಬಗ್ಗೆ